ಲಿಖಿತ ಮೂಲಕ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

ನೂರ ಮೂವತ್ತೆಂಟನೆಯ ಅಧಿವೇಶನ

ಗುರುವಾರ, ದಿನಾಂಕ: 18ನೇ ಜುಲೈ, 2019

ದಿನಗೂಲಿ ನೌಕರರಿಗೆ ಉಪಧನ ಪಾವತಿ ಕುರಿತು

ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು):-

348 (353) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಸರ್ಕಾರಿ ಸುತ್ತೋಲೆ ಸಂಖ್ಯೆ ಕಾಇ : 58 ಎಲ್‌ಡಬ್ಲೂಎ ದಿನಾಂಕ : 13-10-2016ರ ಉಪಧನ ಪಾವತಿ ಕಾಯ್ದೆ 1972 ರಡಿ ಕಲಂ 2(ಇ) ಪ್ರಕಾರ ರಾಜ್ಯ ಸರ್ಕಾರದ ದಿನಗೂಲಿ ನೌಕರರಿಗೆ ಕಲಂ 4(1)ರ ಪ್ರಕಾರ 5 ವರ್ಷಗಳ ನಿರಂತರ ಸೇವೆಯನ್ನು ಸಲ್ಲಿಸಿ ಹೊರಬಂದ ನೌಕರರಿಗೆ ಉಪಧನ ಪಾವತಿಯನ್ನು ಮಾಡುವಂತೆ ಆದೇಶಿಸಿರುವುದು ನಿಜವೇ ;

(ಆ) ಸರ್ಕಾರಿ ಅಧಿಸೂಚನೆ ಸಂಖ್ಯೆ ಸಿಆಸುಇ : 146 : ಸೇಸ್ಥಅ 2015, ದಿನಾಂಕ : 16-05-2019 ರಲ್ಲಿ ಹೊರಡಿಸಿರುವ ಅಧಿಸೂಚನೆಯಂತೆ ಅಧಿನಿಯಮದಡಿ ಅಧಿಸೂಚಿಸಲ್ಪಟ್ಟ ದಿನಗೂಲಿ ನೌಕರರಿಗೆ ಮಾತ್ರ ಉಪಧನ ಪಾವತಿಗೆ ಅರ್ಹರಿರುತ್ತಾರೆಂದು ಆದೇಶಿಸಿರುವುದು ಸಮಂಜಸವೇ ;

(ಇ) ಈ ಆದೇಶದಿಂದ ಅಧಿಸೂಚಿಸಲ್ಪಟ್ಟ ನೌಕರರನ್ನು ಹೊರತುಪಡಿಸಿ ಈ ಹಿಂದೆ 25-30 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತಿ ಅಥವಾ ಮರಣ ಹೊಂದಿದ ದಿನಗೂಲಿ ನೌಕರರು ಉಪಧನ ಪಾವತಿಯಿಂದ ವಂಚಿತರಾಗುವುದಿಲ್ಲವೇ ;

(ಈ) ಎರಡು ಇಲಾಖೆಗಳ ವಿಭಿನ್ನ ಆದೇಶಗಳಿಂದ ಉಪಧನ ಪಾವತಿ ಮಾಡಲು ಇಲಾಖೆಗಳು ಗೊಂದಲಕ್ಕೀಡಾಗುವುದಿಲ್ಲವೇ ;

(ಉ) ಹಾಗಿದ್ದಲ್ಲಿ, ಉಪಧನ ಪಾವತಿ ಕಾಯ್ದೆ 1972ರಂತೆ 5 ವರ್ಷ ಮೇಲ್ಪಟ್ಟು ಕಾರ್ಯನಿರ್ವಹಿಸಿ ನಿವೃತ್ತಿ ಅಥವಾ ಮರಣ ಹೊಂದಿದ ದಿನಗೂಲಿ ನೌಕರರಿಗೆ ಉಪಧನ ಪಾವತಿಯನ್ನು ಮಾಡಲು ಆದೇಶ ಹೊರಡಿಸಲು ಅಗತ್ಯ ಕ್ರಮಕೈಗೊಳ್ಳಲಾಗುವುದೇ ?